# ಕರ್ನಾಟಕ

ಪಾಕಿಸ್ತಾನ ಭಯೋತ್ಪಾದನೆ ವಿರುದ್ಧ ಮಾತನಾಡುತ್ತಿದೆ ಎಂದರೆ,
ಸನ್ನಿ ಲಿಯೋನ್ ನೀಲಿ ಚಿತ್ರದ ವಿರುದ್ಧ ಮಾತನಾಡಿದಂತೆ!
■ ಬಕ್ ಸಾಲಾ

ಟ್ವೀಟಾ ಪತ್ರಿ

## ಪಂಚ್‌ರ್!

'ಸಕಾಲ'ದೊಳಗೆ ಸೇವೆ
ನೀಡದಿದ್ದರೆ ದಂಡ, ಶಿಕ್ಷೆ.

ಆ ದಂಡ ಹಾಗೂ ಶಿಕ್ಷೆ ವಿಧಿಸಲು
ಯಾವುದೇ ಕಾಲಮಿತಿ ಇಲ್ಲ,
ಅಧಿಕಾರಿಗಳು ಹಾಯಾಗಿರಬಹುದು!

## ಜೆಸಿಬಿಗೆ ರೈಲು ಡಿಕ್ಕಿ: ಒಬ್ಬ ಸಾವು, ತಪ್ಪಿದ ಬೆಂಕಿ ದುರಂತ



ದೊಡ್ಡಬಳ್ಳಾಪುರದ ವಡ್ಡರಹಳ್ಳಿ ರೈಲ್ವೆ ನಿಲ್ದಾಣದ ಸಮೀಪ ಅಪಘಾತಕ್ಕೀಡಾದ ಜೆಸಿಬಿ ವಾಹನ.

**ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನ ವಡ್ಡರಹಳ್ಳಿ ರೈಲ್ವೆ ನಿಲ್ದಾಣದ ಬಳಿ ಭಾನುವಾರ ಮಧ್ಯಾಹ್ನ ಮಾನವರಹಿತ ರೈಲ್ವೆ ಕ್ರಾಸಿಂಗ್‌ನಲ್ಲಿ ಜೆಸಿಬಿಗೆ ಜಬ್ಬಲ್‌ಪುರ-ಯಶವಂತಪುರ ಎಕ್ಸ್‌ಪ್ರೆಸ್ ರೈಲು ಡಿಕ್ಕಿಯಾಗಿ ಜೆಸಿಬಿಯಲ್ಲಿದ್ದ ಸಹಾಯಕ ಮೃತಪಟ್ಟಿದ್ದಾನೆ. ಚಾಲಕ ತೀವ್ರವಾಗಿ ಗಾಯಗೊಂಡಿದ್ದಾನೆ. ಭಾನುವಾರ ಮಧ್ಯಾಹ್ನ 1.45ರ ವೇಳೆ ರೈಲು ಗೌರಿಬಿದನೂರಿನಿಂದ ಬೆಂಗಳೂರಿನ ಕಡೆಗೆ ಬರುತ್ತಿತ್ತು. ವಡ್ಡರಹಳ್ಳಿ ರೈಲ್ವೆ ನಿಲ್ದಾಣದ ಸಮೀಪ ರೈಲ್ವೆ ಹಳಿಯಲ್ಲಿ ಕಾಮಗಾರಿ ನಡೆಯುತ್ತಿದ್ದುದರಿಂದ ರೈಲಿನ ವೇಗ ಕಡಿಮೆ ಇತ್ತು. ಅಲ್ಲದೆ, ರೈಲಿನ ಸ್ಟೇರನ್

# ಮತ್ತೊಂದು ಎಂಡೋ ಮಾದರಿ ದುರಂತ ಭೀತಿ

### ■ ಮಲೆನಾಡಿನಲ್ಲಿ ಶುಂಠಿಗೆ ಅಪಾಯಕಾರಿ ಕೀಟನಾಶಕ ಸಿಂಪಡಣೆ ■ ವಿಷವಾಗುತ್ತಿರುವ ನೀರು, ಬಂಜರಾಗುತ್ತಿರುವ ಭೂಮಿ

**ಬೆಂಗಳೂರು:** ಎಂಡೋಸಲ್ಫಾನ್‌ನಷ್ಟೇ ಅಪಾಯಕಾರಿ ಕ್ರಿಮಿನಾಶಕವನ್ನು ಮಲೆನಾಡಿನ ಶುಂಠಿ ಮೇಲೆ ಹೇರಳವಾಗಿ ಸಿಂಪಡಣೆ ಮಾಡುತ್ತಿದ್ದು, ಈಗ ಕರಾವಳಿಯಂತೆಯೇ ಮಲೆನಾಡು ಕೂಡ ಮತ್ತೊಂದು ರೀತಿಯ ಎಂಡೋ ಅವಘಡಕ್ಕೆ ತುತ್ತಾಗುವ ಲಕ್ಷಣಗಳಿವೆ ಎಂದು ವೃಕ್ಷಲಕ್ಷ ಆಂದೋಲನ ಆತಂಕ ವ್ಯಕ್ತಪಡಿಸಿದೆ.

ವೃಕ್ಷಲಕ್ಷ ಈಚೆಗೆ ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ಬೆಳಕಿಗೆ ಬಂದಿದ್ದು 'ಮಲೆನಾಡಿನಲ್ಲಿ ಬೆಳೆಯುತ್ತಿರುವ ಶುಂಠಿಗೆ ನಿಷೇಧಿಸಲ್ಪಟ್ಟ ಕ್ರಿಮಿನಾಶಕಗಳ ಅತ್ಯಧಿಕ ಬಳಕೆಯಾಗುತ್ತಿದೆ. ಇದು ಎಂಡೋ ಭೀಕರತೆಯನ್ನು ಮರುಕಳಿಸುವ ಭೀತಿಯನ್ನು ಸೃಷ್ಟಿಸಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಪಶ್ಚಿಮಘಟ್ಟ ಕಾರ್ಯಪಡೆ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಭಾನುವಾರ ನಗರದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ಸಮೀಕ್ಷಾ ವರದಿಯ ವಿವರಗಳನ್ನು ಬಹಿರಂಗಪಡಿಸಿದರು.

ಮಲೆನಾಡಿನಲ್ಲಿ ಶುಂಠಿ ಬೆಳೆಸಲು ಬಳಕೆಯಾಗುತ್ತಿರುವ ಅಪಾರ ಪ್ರಮಾಣದ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕದಿಂದ ಭೂಮಿ ಬಂಜರು ಆಗುತ್ತಿದೆ. ರಾಸಾಯನಿಕಗಳು ವರದಾ, ಕುಮದ್ವತಿ, ತುಂಗಭದ್ರಾ ನದಿಗಳನ್ನು ಸೇರುತ್ತಿದ್ದು, ಹಳ್ಳ-ಕೆರೆಗಳಲ್ಲಿ ಮೀನು, ಏಡಿ, ಕಪ್ಪೆ ಮತ್ತಿತರ ಜಲಚರಗಳಿಗೆ ಕುತ್ತು ಬಂದಿದೆ. ಕುರಿಗಳು, ದನದ ಹಿಂಡು ಶುಂಠಿ ಬೆಳೆ ಕಟಾವಿನ ನಂತರ ಆ ಗದ್ದೆಗಳಿಗೆ ಮೇಯಲು ಕೂಡ ಬರುತ್ತಿಲ್ಲ, ಜೇನು ಕೂಡ ಗೂಡು ಕಟ್ಟುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಕೊಡಗು, ಹಾಸನ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ಇಡೀ ಮಲೆನಾಡಿನಲ್ಲಿ ಸುಮಾರು ಒಂದು ಲಕ್ಷ ಎಕರೆ ಪ್ರದೇಶದಲ್ಲಿ ಶುಂಠಿ ಬೆಳೆಯಲಾಗುತ್ತಿದ್ದು, ಪ್ರತಿ ತಾಲೂಕಿನಲ್ಲಿ 5 ಸಾವಿರ ಎಕರೆ ಪ್ರದೇಶದಲ್ಲಿ ಶುಂಠಿ ಇದೆ. ಪ್ರತಿ ತಾಲೂಕಿನಲ್ಲಿ ಸುಮಾರು ಎರಡು ಕೋಟಿ ರೂ.ಗಿಂತ ಅಧಿಕ ಕ್ರಿಮಿನಾಶಕ ಮಾರಾಟವಾಗುತ್ತಿದೆ. ಬನವಾಸಿವೊಂದರಲ್ಲೇ ವರ್ಷಕ್ಕೆ 1 ಲಕ್ಷ ಲೀ. ಕ್ರಿಮಿನಾಶಕ ಸಿಂಪಡಣೆಯಾಗುತ್ತಿದೆ. ಅಂದರೆ ಎಕರೆಗೆ ಅಲ್ಲಿ 50 ಲೀ. ಕ್ರಿಮಿನಾಶಕ ಸುರಿಯಲಾಗುತ್ತಿದೆ ಎಂದು ಆಶೀಸರ ಆತಂಕ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆ ಕೂಡಲೇ ಶುಂಠಿಯಲ್ಲಿ ಸೇರಿರುವ ರಾಸಾಯನಿಕಗಳ ಬಗ್ಗೆ ಪರೀಕ್ಷಿಸಬೇಕು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಶುಂಠಿ ಬೆಳೆದ ಸ್ಥಳಗಳ ನೀರು ಮತ್ತು ಮಣ್ಣು ಪರೀಕ್ಷೆ ನಡೆಸಬೇಕು. ಸರ್ಕಾರ ಕೂಡಲೇ ಕೃಷಿ, ಆರೋಗ್ಯ ಮತ್ತು ಪರಿಸರ ಇಲಾಖೆಗಳ ಸಭೆ ಕರೆದು, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಒತ್ತಾಯಿಸಿದರು. ಆಂದೋಲನದ ಸಂಚಾಲಕ ಬಿ.ಎಚ್. ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

### ■ ನಿಷೇಧಿತ ಕ್ರಿಮಿನಾಶಕಗಳು



**ಅ**ಲ್ಡಿಕಾರ್ಬ, ಕ್ಲೋರ್‌ಬೆಂಜಿಲೇಟ್, ಬೆಂಜಿನ್ ಹೆಕ್ಸಾಕ್ಲೋರೈಡ್, ಕ್ಲೋರೋಫೆನ್‌ವಿನ್‌ಫೋಸ್, ಮಲ್ಯೆಯಿಕ್ ಸೇರಿದಂತೆ ಕೃಷಿ ಇಲಾಖೆ ನಿಷೇಧಿಸಿದ ಎಂಡೋಸಲ್ಫಾನ್‌ನಂತಹ 34 ನಿಷೇಧಿತ ಕ್ರಿಮಿನಾಶಕಗಳು ಯಥೇಚ್ಛವಾಗಿ ಮಾರಾಟ ಆಗುತ್ತಿವೆ. ಈ ಬಗ್ಗೆ ಸರ್ಕಾರದ ಡ್ರಗ್ ಕಂಟ್ರೋಲರ್‌ಗಳು, ಕೃಷಿ ಇಲಾಖೆ, ಸಾವಯವ ವಿಭಾಗಗಳು, ಪ್ರಯೋಗಾಲಯಗಳ ವಿಜ್ಞಾನಿಗಳು ಮೌನ ವಹಿಸಿದ್ದಾರೆ.

## ಚಿಕ್ಕಮಗಳೂರಲ್ಲಿ 22000 ಹೆಕ್ಟೇರ್ ಕಾಡು ಗುಳುಂ

### ■ ಪಶ್ಚಿಮಘಟ್ಟ ಕಾರ್ಯಪಡೆ ವರದಿಯಲ್ಲಿ ಕಳವಳಕಾರಿ ಅಂಶ ■ ಸಸ್ಯಪ್ರಭೇದ, ಪ್ರಾಣಿಗಳಿಗೆ ಕುತ್ತು

**ಬೆಂಗಳೂರು:** ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 22 ಸಾವಿರ ಹೆಕ್ಟೇರ್ ಕಾಡು ಅತಿಕ್ರಮಣವಾಗಿದೆ ಎಂಬ ಕಳವಳಕಾರಿ ಸಂಗತಿಯು ಅಧ್ಯಯನ ವರದಿಯೊಂದರಲ್ಲಿ ಬೆಳಕಿಗೆ ಬಂದಿದೆ.

ಪಶ್ಚಿಮಘಟ್ಟ ಕಾರ್ಯಪಡೆಯ ಸೂಚನೆ ಮೇರೆಗೆ ಚಿಕ್ಕಮಗಳೂರಿನಲ್ಲಿ ನಡೆಸಿದ ಅಧ್ಯಯನ ವರದಿಯ ಅಂಶಗಳನ್ನು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಪ್ರಾಧ್ಯಾಪಕ ಹಾಗೂ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರನ್ ಮಾಧ್ಯಮಗಳ ಮುಂದೆ ಹಂಚಿಕೊಂಡರು.

ಈ ಅತಿಕ್ರಮಣದಿಂದಾಗಿ ಜೀವವೈವಿಧ್ಯತೆಯಿಂದ ಕೂಡಿದ ಶೋಲಾ ಕಾಡು ಸೇರಿದಂತೆ ಅಳಿವಿನಂಚಿನಲ್ಲಿರುವ ಸಸ್ಯಪ್ರಭೇಧ ಮತ್ತು ಜೀವಿಗಳಿಗೆ ಕುತ್ತು ಬಂದಿದೆ ಎಂದು ರಾಮಚಂದ್ರನ್ ಕಳವಳ ವ್ಯಕ್ತಪಡಿಸಿದರು.

**ವರದಿಯಲ್ಲೇನಿದೆ?:** ಸುಮಾರು 7,201 ಚ.ಕಿ.ಮೀ. ಅರಣ್ಯ ಪ್ರದೇಶವನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಅವ್ಯಾಹತವಾಗಿ ಅತಿಕ್ರಮಣ ನಡೆಯುತ್ತಿದ್ದು, ಸುಮಾರು 22 ಸಾವಿರ ಹೆಕ್ಟೇರ್ ಪ್ರದೇಶವು ವಿವಿಧ ಪ್ರಕಾರದಲ್ಲಿ ಅತಿಕ್ರಮಣವಾಗಿದೆ. ಇದರಲ್ಲಿ ಶೇ. 27ರಷ್ಟು ತರೀಕೆರೆಯಲ್ಲಿ, ಶೇ. 25ರಷ್ಟು ಎನ್.ಆರ್. ಪುರ, ಕಡೂರಿನಲ್ಲಿ ಶೇ. 15, ಚಿಕ್ಕಮಗಳೂರು ಶೆ. 11.27, ಮೂಡಿಗೆರೆ ಶೇ. 9.2, ಕೊಪ್ಪ ಶೇ. 8.17, ಶೃಂಗೇರಿಯಲ್ಲಿ ಶೇ. 4.4ರಷ್ಟು ಅತಿಕ್ರಮಣವಾಗಿದೆ. ಆ ಜಾಗದಲ್ಲೆಲ್ಲಾ ಕಾಫಿ, ನೆಡುತೋಪು ಮತ್ತಿತರ ಬೆಳೆಗಳ ತೋಟಗಳು ಹರಡಿಕೊಂಡಿವೆ.

ಸಾವಿರಾರು ಎಕರೆ ಹುಲ್ಲುಗಾವಲು ನೆಡುತೋಪು ಆಗಿ ಮಾರ್ಪಾಡು ಹೊಂದಿದೆ. ಪರಿಣಾಮ ಜಲಮೂಲಗಳ ಲಭ್ಯತೆ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಅಷ್ಟೇ ಅಲ್ಲ,



200 ಜಾತಿಯ ಅಪಾಯದ ಅಂಚಿನಲ್ಲಿರುವ ಸಸ್ಯ ವರ್ಗ, 400 ಜಾತಿಯ ಔಷಧೀಯ ಸಸ್ಯವರ್ಗ, ವಿವಿಧ ಜಾತಿಯ ಗಿಡಗಳ ಪೈಕಿ ಶೇ. 31ರಷ್ಟು ವಿನಾಶದ ಅಂಚಿನ ಪಟ್ಟಿಗೆ ಸೇರಿವೆ. ಈ ಪ್ರದೇಶ ತುಂಗಭದ್ರ ಜಲಮೂಲವಾಗಿರುವುದರಿಂದ ಮುಂದಿನ ದಿನಗಳಲ್ಲಿ ನೀರಿನ ಕೊರತೆ ಕಂಡುಬರಲಿದೆ.

ಈ ಪ್ರದೇಶದ ಜಲ ಮತ್ತು ಝುರಿಗಳು ವರ್ಷದ 12 ತಿಂಗಳೂ ಹರಿಯುತ್ತಿದ್ದವು. ಆದರೆ, ಇತ್ತೀಚೆಗೆ ನಾಲ್ಕಾರು ತಿಂಗಳು ಮಾತ್ರ ಅಲ್ಲಿ ನೀರು ಹರಿಯುತ್ತಿರುವುದು ಅಧ್ಯಯನದ ವೇಳೆ ಕಂಡುಬಂದಿದೆ. ಗಣಿಗಾರಿಕೆಯಿಂದ ಜೀವವೈವಿಧ್ಯ ಶೋಲಾ ಕಾಡಿಗೆ ಧಕ್ಕೆ ಉಂಟಾಗುತ್ತಿದೆ. ಏಕಜಾತಿ ನೆಡುತೋಪು ನಿರ್ಮಾಣವು ಶೋಲಾ ಹುಲ್ಲುಗಾವಲು ಪ್ರದೇಶಕ್ಕೆ ಸಾಧುವಲ್ಲ.

ಈ ಹಿನ್ನೆಲೆಯಲ್ಲಿ ನೀತಿ-ನಿರೂಪಕರು ಜಿಲ್ಲೆಯ ಅರಣ್ಯದ ಉಳಿವಿಗೆ ವಿಶೇಷ ಆದ್ಯತೆ ನೀಡಬೇಕಿದೆ. ಇಲ್ಲಿನ ಅಂತರ್ಜಲ, ಜೀವವೈವಿಧ್ಯ, ಹಳ್ಳ-ಹೊಳೆ, ಭೂಮಿಯ ಫಲವತ್ತತೆ, ನಿರಂತರ ನೀರು ಹರಿಯುವಿಕೆ, ವನ್ಯಜೀವಿಗಳ ಆವಾಸಸ್ಥಾನ, ಭೂಸವಕಳಿ ತಡೆ ಮತ್ತಿತರ ಸಮಸ್ಯೆಗಳ ನಿರ್ವಹಣೆಗೆ ಸಮರ್ಪಕ ನೀತಿ ರೂಪಿಸಬೇಕು.